# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು– 572 103

**ದಿನಾಂಕ: 04.09.2024 ರಂದು ಸಮಯ 10:30 ಗಂಟೆಗೆ ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣ, ತುಮಕೂರು ವಿಶ್ವವಿದ್ಯಾನಿಲಯ ಆವರಣ, ಬಿ.ಹೆಚ್.ರಸ್ತೆ, ತುಮಕೂರು–572103 ಇಲ್ಲಿ ನಡೆದ 2024–25ನೇ ಸಾಲಿನ ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು**

**ಹಾಜರಾದ ಸದಸ್ಯರು**

| | | |
|---|---|---|
| 1. | **ಪ್ರೊ. ಎಂ. ವೆಂಕಟೇಶ್ವರಲು**<br>ಮಾನ್ಯ ಕುಲಪತಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | **ಅಧ್ಯಕ್ಷರು** |
| 2. | **ಡಾ. ಶೋಭ,** ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, 2ನೇ ಮಹಡಿ, ತಾಂತ್ರಿಕ ಶಿಕ್ಷಣ ಇಲಾಖೆ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು–560001. | **ಸದಸ್ಯರು** |
| 3. | **ಶ್ರೀ ಕೆ. ಷಡಕ್ಷರಿ, ಬಿನ್ ಲೇಟ್ ಕಲ್ಲಪ್ಪ**<br>ಮಾನ್ಯ ವಿಧಾನ ಸಭಾ ಸದಸ್ಯರು, ತಿಪಟೂರು ಕ್ಷೇತ್ರ, ನಂ. 455/ಎ, 4ನೇ ಮುಖ್ಯ ರಸ್ತೆ,<br>ಕೆ. ಆರ್. ಬಡಾವಣೆ, ತಿಪಟೂರು, ತುಮಕೂರು ಜಿಲ್ಲೆ–572202, | **ಸದಸ್ಯರು** |
| 4. | **ಶ್ರೀ ಡಿ.ಟಿ ಶ್ರೀನಿವಾಸ್**<br>ಮಾನ್ಯ ವಿಧಾನ ಪರಿಷತ್ತಿನ ಶಾಸಕರು, ಕೆ.ಆರ್ ಪುರಂ, ಬೆಂಗಳೂರು | **ಸದಸ್ಯರು** |
| 5. | **ಡಾ. ಪ್ರಸನ್ನ**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ (ಸ್ವಾಯತ್ತ) ತುಮಕೂರು ಜಿಲ್ಲೆ–572216 | **ಸದಸ್ಯರು** |
| 6. | **ಡಾ. ಚಿತ್ತರಂಜನ್ ರೈ**<br>ಪ್ರಾಂಶುಪಾಲರು, ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ಬಿ.ಹೆಚ್. ರಸ್ತೆ ತಿಪಟೂರು, ತುಮಕೂರು ಜಿಲ್ಲೆ–572201 | **ಸದಸ್ಯರು** |
| 7. | **ಶ್ರೀಮತಿ ವಸಂತ ಟಿ. ಡಿ**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಬಿ.ಹೆಚ್‌ರಸ್ತೆ, ತುಮಕೂರು–572102. | **ಸದಸ್ಯರು** |
| 8. | **ಡಾ. ಶ್ರೀಧರ್ ಎನ್**<br>ಪ್ರಾಂಶುಪಾಲರು, ಶ್ರೀಮತಿ ಮತ್ತು ಶ್ರೀ ವೈ.ಇ.ಆರ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾವಗಡ, ತುಮಕೂರು ಜಿಲ್ಲೆ–561202. | **ಸದಸ್ಯರು** |
| 9. | **ಡಾ. ಜಾಯ್ ನೆರೆಲ್ಲಾ,**<br>ಪ್ರಾಂಶುಪಾಲರು, ಯೂನಿಯನ್ ಕ್ರಿಶ್ಚಿಯನ್ ಕಾಲೇಜು, ಶಿರಾ ಗೇಟ್, ತುಮಕೂರು. | **ಸದಸ್ಯರು** |
| 10. | **ಶ್ರೀ ಕುಮಾರಸ್ವಾಮಿ ಹೆಚ್.ಬಿ.**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು, ತುಮಕೂರು ಜಿಲ್ಲೆ– **572201** | **ಸದಸ್ಯರು** |
| 11. | **ಪ್ರೊ. ರೇವಣಸಿದ್ದೇಶ್ವರ ಡಿ.ಆರ್.**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಡವನಹಳ್ಳಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ–**572112** | **ಸದಸ್ಯರು** |
| 12. | **ಡಾ. ಹೆಚ್.ಎಂ. ದಕ್ಷಿಣಮೂರ್ತಿ**<br>ಪ್ರಾಂಶುಪಾಲರು, ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಕಾಲೇಜು, ಬಿ.ಹೆಚ್. ರಸ್ತೆ, ತುಮಕೂರು | **ಸದಸ್ಯರು** |

| | | |
|---|---|---|
| 13. | **ಪ್ರೊ. ಕೃಷ್ಣ ಡಿ.**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಬ್ಬೂರು, ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ–**572120** | ಸದಸ್ಯರು |
| 14. | **ಡಾ. ಪುಟ್ಟರಾಜು ಆರ್**<br>ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿ.ಎಸ್ ಪುರ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ | ಸದಸ್ಯರು |
| 15. | **ಪ್ರೊ. ಜಯಶೀಲ**<br>ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 16. | **ಪ್ರೊ. ಪಿ. ಪರಮಶಿವಯ್ಯ**<br>ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 17. | **ಪ್ರೊ. ಕೆ.ಎಸ್. ಗಿರೀಶ್**<br>ಪ್ರಾಧ್ಯಾಪಕರು, ಸ್ನಾತಕೋತ್ತರ ಜೀವ ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 18. | **ಪ್ರೊ. ಬಿ. ಶೇಖರ್**<br>ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 19. | **ಡಾ. ಮನೋಹರ್ ಶಿಂಧೆ,**<br>ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | ಸದಸ್ಯರು |
| 20. | **ಡಾ. ಕೊಟ್ರೇಶ್ ಎಂ.,**<br>ಡೀನರು, ಕಲಾ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | ಸದಸ್ಯರು |
| 21. | **ಡಾ. ಪರಮಶಿವಯ್ಯ ಪಿ.,**<br>ಡೀನರು, ವಾಣಿಜ್ಯ ನಿಕಾಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | ಸದಸ್ಯರು |
| 22. | **ಡಾ. ಸಿದ್ದರಾಜು ಕೆ.ಎಸ್**<br>ಡೀನರು, ಶಿಕ್ಷಣ ನಿಕಾಯ, ಶ್ರೀ ಸಿದ್ಧಾರ್ಥ ಶಿಕ್ಷಣ ಮಹಾವಿದ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | ಸದಸ್ಯರು |
| 23. | **ಶೋಭಾದೇವಿ. ಜಿ**<br>ಪ್ರಥಮ ವರ್ಷದ ಎಂ.ಎಸ್ಸಿ ಗಣಿಶಾಸ್ತ್ರ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | ಸದಸ್ಯರು |
| 24. | **ಸುಮಾ ಕೆ.ಆರ್**<br>ಪ್ರಥಮ ವರ್ಷದ ಎಂ.ಸಿ.ಎ ವಿಭಾಗ (2ನೇ ಸೆಮಿಸ್ಟರ್), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | ಸದಸ್ಯರು |
| 25. | **ಭಾನುಪ್ರಿಯ. ಎ**<br>ದ್ವಿತೀಯ ಬಿ.ಎಸ್ಸಿ (ಸಿ.ಝಡ್ ವಿಭಾಗ), ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು. | ಸದಸ್ಯರು |
| 26. | **ಆನಂದ್ ಎಸ್.ಜಿ**<br>S/o ಗಂಗಾಧರಪ್ಪ, ದ್ವಿತೀಯ ಬಿ.ಕಾಂ ವಿಭಾಗ (4ನೇ ಸೆಮಿಸ್ಟರ್),ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು. | ಸದಸ್ಯರು |
| 27. | **ರೋಹಿತ್. ಹೆಚ್**<br>ದ್ವಿತೀಯ ಬಿ.ಸಿ.ಎ ವಿಭಾಗ (4ನೇ ಸೆಮಿಸ್ಟರ್), ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು. | ಸದಸ್ಯರು |

| | | |
|---|---|---|
| 28. | ನಿತಿನ್ ಕುಮಾರ್ ಎನ್.<br>ದ್ವಿತೀಯ ಬಿ.ಎಸ್ಸಿ (ಸಿ.ಪಿ. ವಿಭಾಗ), ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು. | ಸದಸ್ಯರು |
| 29. | ಡಾ. ಬಿ. ರವಿವೆಂಕಟ್,<br>ಗ್ರಂಥಪಾಲರು, ವಿಶ್ವವಿದ್ಯಾನಿಲಯ ಗ್ರಂಥಾಲಯ, ತುಮಕೂರು ವಿಶ್ವವಿದ್ಯಾನಿಲಯ | ಸದಸ್ಯರು |
| 30. | ಡಾ. ಬಸವರಾಜ ಜಿ.,<br>ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. . | ಸದಸ್ಯರು |
| 31. | ಡಾ. ಬಿ.ಟಿ. ಸಂಪತ್‌ಕುಮಾರ್<br>ನಿರ್ದೇಶಕರು, ಯೋಜನೆ, ಮೇಲ್ವಿಚಾರಣೆಯ ಸಮಿತಿಯ ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | ಸದಸ್ಯರು |
| 32. | ಡಾ. ಪಾಟೀಲ್ ಮಲ್ಲಿಕಾರ್ಜುನ ಬಿ.<br>ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | ಸದಸ್ಯರು |
| 33. | ಡಾ. ಎ.ಎಂ. ಮಂಜುನಾಥ, ನಿರ್ದೇಶಕರು (ಪ್ರ) ದೈಹಿಕ ಶಿಕ್ಷಣ ವಿಭಾಗ, ವಿಶ್ವವಿದ್ಯಾನಿಲಯ, ತುಮಕೂರು. | ಸದಸ್ಯರು |
| 34. | ಪ್ರೊ. ಪ್ರಸನ್ನಕುಮಾರ್ ಕೆ.<br>ಕುಲಸಚಿವರು (ಮೌಲ್ಯಮಾಪನ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | ಸದಸ್ಯರು |
| 35. | ಶ್ರೀಮತಿ ನಹೀದ ಝಮ್ ಝಮ್ (ಕೆ.ಎ.ಎಸ್)<br>ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. | ಸದಸ್ಯ ಕಾರ್ಯದರ್ಶಿ |

**ಹಾಜರಾಗದ ಸದಸ್ಯರು**

| | | |
|---|---|---|
| 1. | ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ,<br>ಮಾನ್ಯ ವಿಧಾನ ಪರಿಷತ್ತಿನ ಶಾಸಕರು, ನಂ. 604, ಛಲವಾದಿ ನಿವಾಸ,<br>ವಾಯುನಂದನ ಲೇಔಟ್, ಹೆಬ್ಬಾಳ, ಕೆಂಪಾಪುರ, ಬೆಂಗಳೂರು–560024, | ಸದಸ್ಯರು |
| 2. | ಪ್ರೊ. ನಾಗಭೂಷಣ ಹೆಚ್<br>ಪ್ರಾಧ್ಯಾಪಕರು, ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು | ಸದಸ್ಯರು |
| 3. | ನಿರ್ದೇಶಕರು,<br>ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, 3ನೇ ಮಹಡಿ, ಅರಮನೆ ರಸ್ತೆ, ಬೆಂಗಳೂರು.560001. | ಸದಸ್ಯರು |

**ಪ್ರಸ್ತಾವನೆ:**

ದಿನಾಂಕ:04.09.2024ರ ಬುಧವಾರದಂದು ಸಮಯ 10:30 ಗಂಟೆಗೆ ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ನಡೆದ 2024–25ನೇ ಸಾಲಿನ ಪ್ರಥಮ ಸಾಮಾನ್ಯ ವಿದ್ಯಾವಿಷಯಕ ಪರಿಷತ್ತು ಸಭೆಗೆ ಹೊಸದಾಗಿ ನಾಮನಿರ್ದೇಶನಗೊಂಡ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಟಿ ಶ್ರೀನಿವಾಸ್, ಡಾ. ಎ.ಎಂ ಮಂಜುನಾಥ, ನಿರ್ದೇಶಕರು (ಪ್ರ), ದೈಹಿಕ ಶಿಕ್ಷಣ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ ಮತ್ತು ವಿದ್ಯಾರ್ಥಿಯಾದ ಶ್ರೀ ನಿತಿನ್ ಕುಮಾರ್ (ಕುಲಪತಿಗಳ ನಾಮನಿರ್ದೇಶಿತ) ಹಾಗೂ ಉಳಿದ ಸದಸ್ಯರುಗಳನ್ನು ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತಿಸಿದರು. ತದನಂತರ ಸಭೆಯಲ್ಲಿ ಈ ಕೆಳಕಂಡ ಕಾರ್ಯಸೂಚಿಗಳ ಬಗ್ಗೆ ಚರ್ಚಿಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಟಿ ಶ್ರೀನಿವಾಸ್, ಇವರು ಕೆಳಕಂಡ ವಿಷಯಗಳ ಬಗ್ಗೆ ವಿಶ್ವವಿದ್ಯಾನಿಲಯದ ಗಮನಕ್ಕೆ ತಂದು ಸಲಹೆಗಳನ್ನು ನೀಡಿದರು**

- ರಾಜ್ಯದ ವಿಶ್ವವಿದ್ಯಾನಿಲಯಗಳ ಅಭಿವೃದ್ಧಿಗೆ ಸರ್ಕಾರದಿಂದ 230 ಕೋಟಿ ಮೊತ್ತವು ಮಂಜೂರಾಗಿದ್ದು, ತುಮಕೂರು ವಿಶ್ವವಿದ್ಯಾನಿಲಯಕ್ಕೆ ಮಂಜೂರಾಗಿರುವ ಮೊತ್ತದ ಕುರಿತು ಗಮನ ಹರಿಸುವಂತೆ ಸಲಹೆ ನೀಡಿದರು.
- ವಿಶ್ವವಿದ್ಯಾನಿಲಯದಲ್ಲಿ ಇತರೆ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವಾಗ ಅದರ ಸಾಧಕ-ಭಾದಕಗಳ ಕುರಿತು ಕೂಲಂಕುಷವಾಗಿ ಪರಿಶೀಲಿಸುವಂತೆ ತಿಳಿಸಿದರು.
- ಘಟಕ ಕಾಲೇಜುಗಳಲ್ಲಿನ ಪ್ರವೇಶಮಿತಿಯ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದ ಖಾಸಗಿ ವಿಶ್ವವಿದ್ಯಾನಿಲಯಗಳಲ್ಲಿ ಅನಿಯಮಿತ ಪ್ರವೇಶಮಿತಿಗಳಿದ್ದು, ಅವುಗಳ ಮಾದರಿಯಂತೆಯೇ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳಿಗೆ ಅನುಗುಣವಾಗಿ ಪ್ರವೇಶಾತಿಗಾಗಿ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಪ್ರವೇಶ ದೊರೆತಲ್ಲಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಅನುಕೂಲವಾಗುವುದಾಗಿ ತಿಳಿಸಿದರು.
- ಪರೀಕ್ಷಾ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟುವ ಸಲುವಾಗಿ ಪರೀಕ್ಷಾ ಕೇಂದ್ರಗಳನ್ನು ಕೇಂದ್ರಿಕರಣ (Centralization) ಮಾಡಲು, ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ CCTV ಅಳವಡಿಸಿಕೊಂಡು, ಪರಿಶೀಲನೆಯನ್ನು (Monitor) ವಿಶ್ವವಿದ್ಯಾನಿಲಯದ ಹಂತದಲ್ಲಿ ಮಾಡಿದಲ್ಲಿ ಪರೀಕ್ಷಾ ಅಕ್ರಮ ಚಟುವಟಿಕೆಗಳನ್ನು ತಡೆಯಬಹುದಾಗಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಕುರಿತು ಈಗಾಗಲೇ ಕ್ರಮ ಕೈಗೊಂಡಿರುವುದಾಗಿ ಮಾನ್ಯ ಕುಲಪತಿಯವರು ಸಭೆಗೆ ತಿಳಿಸಿದರು.

| ಕ್ರ.ಸಂ. | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ನಿರ್ಣಯಗಳು |
|---|---|---|---|
| ದಿನಾಂಕ: **21.02.2024**, ದಿನಾಂಕ: **13.03.2024**, **15.06.2024** ಮತ್ತು **05.08.2024** ರಂದು ಅನುಕ್ರಮವಾಗಿ ನಡೆದ ಎರಡನೇ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆ, ಮೂರನೇ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆ, ನಾಲ್ಕನೇ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆ ಮತ್ತು ಐದನೇ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಗಳ ನಡಾವಳಿಗಳ ದೃಢೀಕರಿಸಲಾಯಿತು. | | | |
| **ಶೈಕ್ಷಣಿಕ ವಿಭಾಗ** | | | |
| 1. | 2024–25.ಸಾ.ವಿ.ಪ–01 ಶೈ.ವಿ–01 | ಸ್ನಾತಕೋತ್ತರ ಎಲ್.ಎಲ್.ಎಂ ಕೋರ್ಸ್‌ನ ಚೇತನ್ ಕುಮಾರ್ ಎಲ್ ಮತ್ತು ತಿಪ್ಪೇಸ್ವಾಮಿ.ವಿ ವಿದ್ಯಾರ್ಥಿಗಳಿಗೆ ಪ್ರವೇಶಾನುಮೋದನೆ ನೀಡಿರುವ ಕುರಿತು | ಸ್ನಾತಕೋತ್ತರ ಎಲ್.ಎಲ್.ಎಂ ಕೋರ್ಸ್‌ನ ಚೇತನ್ ಕುಮಾರ್ ಎಲ್ ಮತ್ತು ತಿಪ್ಪೇಸ್ವಾಮಿ.ವಿ ವಿದ್ಯಾರ್ಥಿಗಳು, ಎಲ್.ಎಲ್.ಎಂ ಪದವಿಗೆ ನಿಗದಿತ ಅಂಕ ಶೇ.45% ಹೊಂದದೇ, ಎಲ್.ಎಲ್.ಬಿ ಪದವಿಯಲ್ಲಿ ಶೇ.44.68% 44.53% ಅಂಕ ಹೊಂದಿದ್ದು, ಸದರಿಯವರುಗಳ ಪ್ರವೇಶಾನುಮೋದನೆ ಸಂಬಂಧವಾಗಿ, ದಿನಾಂಕ 21.04.2024ರ ಮದ್ರಾಸು ನ್ಯಾಯಾಲಯದ ಆದೇಶದಂತೆ ಹಾಗೂ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ ನಿಬಂಧನೆಯಂತೆ ಶೇ.45% ಎಂದು ಪರಿಗಣಿಸಿ ಸದರಿಯವರುಗಳ ಪ್ರವೇಶವನ್ನು ಅನುಮೋದಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ವಿದ್ಯಾವಿಷಯಕ ಪರಿಷತ್ತು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |

| | | | |
|---|---|---|---|
| 2. | 2024–25.ಸಾ.ವಿ.ಪ–01 ಶೈ.ವಿ–02 | ಸ್ನಾತಕೋತ್ತರ ಗಣಿತಶಾಸ್ತ್ರ ವಿಷಯದ ಪಠ್ಯಕ್ರಮವನ್ನು ಸಲ್ಲಿಸಿರುವ ಕುರಿತು. | ಸ್ನಾತಕೋತ್ತರ ಗಣಿತಶಾಸ್ತ್ರ ವಿಷಯದ ಪಠ್ಯಕ್ರಮದ ಕುರಿತು ಅಧ್ಯಯನ ಮಂಡಳಿ ಸಲ್ಲಿಸಿರುವ ಪಠ್ಯಕ್ರಮವನ್ನು ಪರಿಶೀಲಿಸಿದ ಸಭೆಯು, ಸದರಿ ಪಠ್ಯಕ್ರಮವನ್ನು ಅನುಮೋದಿಸಿ 2024–25ನೇ ಶೈಕ್ಷಣಿಕ ಸಾಲಿನಿಂದ ಅಳವಡಿಸಿಕೊಳ್ಳಲು ಸಭೆಯು ಅನುಮತಿಸಿ ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |
| 3. | 2024–25.ಸಾ.ವಿ.ಪ–01 ಶೈ.ವಿ–03 | 'ಕಲಿಕೆ ಜೊತೆಗೆ ಕೌಶಲ್ಯ' ಎಂಬ SEC ಪತ್ರಿಕೆಗಳನ್ನು ಅಧಿಸೂಚಿಸಿರುವ ಕ್ರಮದ ಸ್ಥಿರೀಕರಣದ ಕುರಿತು. | ಸದರಿ ವಿಷಯಕ ಕುರಿತು ಚರ್ಚಿಸಿದ ಸಭೆಯು, 'ಕಲಿಕೆ ಜೊತೆಗೆ ಕೌಶಲ್ಯ' ಎಂಬ SEC ಪತ್ರಿಕೆಗಳನ್ನು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ, ವಿಶ್ವವಿದ್ಯಾನಿಲಯವು ಅಧಿಸೂಚಿಸಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ತು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| 4. | 2024–25.ಸಾ.ವಿ.ಪ–01 ಶೈ.ವಿ–04 | Bachelor of Commerce (B.Com) in Banking, Financial Services & Insurance (BFSI-AEDP) ನ ಕೋರ್ಸಿನ ಪಠ್ಯಕ್ರಮವನ್ನು ಅನುಮೋದಿಸಿರುವ ಕ್ರಮವನ್ನು ಸ್ಥಿರೀಕರಣದ ಕುರಿತು. | ಸದರಿ ವಿಷಯದ ಕುರಿತು ಚರ್ಚಿಸಿದ ಸಭೆಯು, Bachelor of Commerce (B.Com) in Banking, Financial Services & Insurance (BFSI-AEDP) ನ ಕೋರ್ಸಿನ ಪಠ್ಯಕ್ರಮದ ಕುರಿತು, ಸರ್ಕಾರದಿಂದ ಸ್ವೀಕೃತವಾದ ಪಠ್ಯಕ್ರಮದ ಸಂಬಂಧ, ವಾಣಿಜ್ಯಶಾಸ್ತ್ರದ ಅಧ್ಯಯನ ಮಂಡಳಿ ಸಲ್ಲಿಸಿರುವ ಶಿಫಾರಸ್ಸಿನನ್ವಯ ಸದರಿ ಕೋರ್ಸಿನ ಪಠ್ಯಕ್ರಮವನ್ನು ವಿಶ್ವವಿದ್ಯಾನಿಲಯವು ಅಧಿಸೂಚಿಸಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ತು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| 5. | 2024–25.ಸಾ.ವಿ.ಪ–01 ಶೈ.ವಿ–05 | 2024–25ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಪದವಿ ಕೋರ್ಸ್‌ಗಳ ಸಮ:ಬೆಸ ಸೆಮಿಸ್ಟರ್‌ನ ಶೈಕ್ಷಣಿಕ ವೇಳಾಪಟ್ಟಿಯನ್ನು ಅಧಿಸೂಚಿಸಿರುವ ಕ್ರಮವನ್ನು ಸ್ಥಿರೀಕರಣದ ಕುರಿತು. | 2024–25ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಪದವಿ ಕೋರ್ಸ್‌ಗಳ ಸಮ:ಬೆಸ ಸೆಮಿಸ್ಟರ್‌ನ ಶೈಕ್ಷಣಿಕ ವೇಳಾಪಟ್ಟಿಯನ್ನು ದಿನಾಂಕ: 13.08.2024 ರಂದು 'ಪರಿಷ್ಕೃತ ಅಧಿಸೂಚನೆ–2' ಅಧಿಸೂಚಿಸಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ತು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |
| 6. | 2024–25.ಸಾ.ವಿ.ಪ–01 ಶೈ.ವಿ–06 | ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಿಗೆ 2024–25ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗಾಗಿ ಪ್ರವೇಶ ಮಿತಿಯನ್ನು ನಿಗದಿಪಡಿಸಿರುವ ಕ್ರಮವನ್ನು ಸ್ಥಿರೀಕರಣದ ಕುರಿತು. | 2024–25ನೇ ಶೈಕ್ಷಣಿಕ ಸಾಲಿನಿಂದ ರಾಜ್ಯ ಶಿಕ್ಷಣ ನೀತಿ ಇದ್ದು, ಅದರನ್ವಯ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಿಗೆ ಕೋರ್ಸು ಮತ್ತು ಕಾಂಬಿನೇಷನ್‌ವಾರು ಪ್ರವೇಶ ಮಿತಿಯನ್ನು ನಿಗದಿಪಡಿಸಿ ಅಧಿಸೂಚನೆಗಳನ್ನು ಹೊರಡಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ವಿದ್ಯಾವಿಷಯಕ ಪರಿಷತ್ತು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. |

| | | | |
|---|---|---|---|
| 7. | 2024–25.ಸಾ.ವಿ.ಪ–01 ಶೈ.ವಿ–07 | 2024–25ನೇ ಶೈಕ್ಷಣಿಕ ಸಾಲಿಗೆ ರಾಜ್ಯ ಶಿಕ್ಷಣ ನೀತಿ ಅನ್ವಯದಂತೆ ವಿವಿಧ ವಿಷಯಗಳ ಅಧ್ಯಯನ ಮಂಡಳಿಗಳು ಸಲ್ಲಿಸಿರುವ ಪಠ್ಯಕ್ರಮಗಳ ಅನುಮೋದನೆ ಕುರಿತು. | 2024–25ನೇ ಶೈಕ್ಷಣಿಕ ಸಾಲಿಗೆ ರಾಜ್ಯ ಶಿಕ್ಷಣ ನೀತಿ ಅನ್ವಯದಂತೆ 32 ವಿವಿಧ ವಿಷಯಗಳ ಅಧ್ಯಯನ ಮಂಡಳಿಗಳು ಸಲ್ಲಿಸಿರುವ ಪಠ್ಯಕ್ರಮಗಳ ಪರಿಶೀಲಿಸಿದ ವಿದ್ಯಾವಿಷಯಕ ಪರಿಷತ್ತು ಸಭೆಯು ಪಠ್ಯಕ್ರಮಗಳನ್ನು ಅನುಮೋದಿಸಿ ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |
| **ಪರೀಕ್ಷಾ ವಿಭಾಗ** | | | |
| 8. | 2024–25.ಸಾ.ವಿ.ಪ–01 ಪ.ವಿ–01 | 2023–24ನೇ ಶೈಕ್ಷಣಿಕ ಸಾಲಿನ ಮಾರ್ಚ್/ಏಪ್ರಿಲ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾದ ವಿದ್ಯಾರ್ಥಿಗಳನ್ನು ವಿಚಾರಣಾ ಸಮಿತಿಯ ಮುಂದೆ ವಿಚಾರಣೆಗೆ ಒಳಪಡಿಸಲಾಗಿದ್ದು, ಸದರಿ ಸಭೆಯ ನಡಾವಳಿಯ ಕುರಿತು. | 2023–24ನೇ ಶೈಕ್ಷಣಿಕ ಸಾಲಿನ ಮಾರ್ಚ್/ಏಪ್ರಿಲ್ ಮಾಹೆಗಳಲ್ಲಿ ನಡೆದ, ವಿವಿಧ ಸ್ನಾತಕ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾದ ವಿದ್ಯಾರ್ಥಿಗಳ ವಿಚಾರಣೆ ಸಂಬಂಧ ದಿನಾಂಕ 12.07.2024ರಂದು ಸಮಿತಿಯು ವಿದ್ಯಾರ್ಥಿಗಳನ್ನು ವಿಚಾರಣೆ ನಡೆಸಿ ಸಲ್ಲಿಸಿರುವ ಸಭಾ ನಡಾವಳಿಯನ್ನು ಪರಿಶೀಲಿಸಿದ ವಿದ್ಯಾವಿಷಯಕ ಪರಿಷತ್ತು ಸಭೆಯು ಸದರಿ ನಡವಳಿಯನ್ನು ಅನುಮೋದಿಸಿ ಸಭಾ ನಡಾವಳಿಯಂತೆ ಮುಂದಿನ ಕ್ರಮ ಕೈಗೊಳ್ಳಲು ಅನುಮತಿಸಿ ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |
| **ಸಂಶೋಧನಾ ವಿಭಾಗ** | | | |
| 9 | 2024–25.ಸಾ.ವಿ.ಪ–01 ಸಂ.ವಿ–01 | ತುಮಕೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ ವಿನಿಯಮ 2023 ನ್ನು ಪರಿಷ್ಕರಿಸಿ ಸಿದ್ಧಪಡಿಸಿರುವ ವಿನಿಯಮವನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ವಿನಿಯಮವನ್ನು ಅನುಮೋದಿಸುವ ವಿಷಯದ ಕುರಿತು. | ತುಮಕೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ ವಿನಿಯಮ 2023 ನ್ನು ಪರಿಷ್ಕರಿಸಿ ಸಿದ್ಧಪಡಿಸಿರುವ ವಿನಿಯಮವನ್ನು ಪರಿಶೀಲಿಸಿದ ಸಭೆಯು, ಸದರಿ ಪರಿಷ್ಕೃತ ಪಿಹೆಚ್.ಡಿ ವಿನಿಯಮವನ್ನು ಅನುಮೋದಿಸಿ ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |
| **ಅಭಿವೃದ್ಧಿ ವಿಭಾಗ** | | | |
| 10 | 2024–25.ಸಾ.ವಿ.ಪ–01 ಅ.ವಿ–01 | 2023–24ನೇ ಸಾಲಿನ ವಾರ್ಷಿಕ ವರದಿ ಕುರಿತು. | 2023–24ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಶೀಲಿಸಿದ ಸಭೆಯು ವಾರ್ಷಿಕ ವರದಿಯನ್ನು ಅನುಮೋದಿಸಿ, ನಿಯಮಾನುಸಾರ ಮುದ್ರಣ ಮಾಡಲು ಹಾಗೂ ಸರ್ಕಾರಕ್ಕೆ ಸಲ್ಲಿಸಲು ಅನುಮೋದಿಸಿ ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |
| **ಕಾಲೇಜು ಅಭಿವೃದ್ಧಿ ಪರಿಷತ್ತು** | | | |
| 11 | 2024–25.ಸಾ.ವಿ.ಪ–01 ಕಾ.ಅ.ಪ–01 | ತುಮಕೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಬಿ.ಇಡಿ ಶಿಕ್ಷಣ ಮಹಾವಿದ್ಯಾಲಯಗಳನ್ನು ಪರಿಶೀಲನೆ ನಡೆಸಿ ಸಮಿತಿಗಳು ಸಲ್ಲಿಸಿರುವ ವರದಿಗಳ ಕುರಿತು. | ತುಮಕೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಬಿ.ಇಡಿ ಕಾಲೇಜುಗಳ ತಪಾಸಣೆ ಸಂಬಂಧ ಸಿಂಡಿಕೇಟ್ ಸದಸ್ಯರ ಅಧ್ಯಕ್ಷತೆಯಲ್ಲಿ ರಚಿಸಿದ್ದ ಸಮಿತಿಯು ಕಾಲೇಜುಗಳ ಪರಿಶೀಲನೆ ನಡೆಸಿ ಮುಚ್ಚಿದ ಲಕೋಟೆಯೊಂದಿಗೆ ಸಲ್ಲಿಸಿರುವ ವರದಿಯನ್ನು ಮಾನ್ಯ ಕುಲಪತಿಯವರು ಎಲ್ಲಾ |

| | | | |
|---|---|---|---|
| | | | ಸದಸ್ಯರುಗಳ ಮುಂದೆ ತೆರೆದು, ವರದಿಯಲ್ಲಿನ ಮಾಹಿತಿಯನ್ನು, ಸಭೆಯ ಗಮನಕ್ಕೆ ತಂದರು.<br>ಈ ಸಂಬಂಧ, 16 ಬಿ.ಇಡಿ ಕಾಲೇಜುಗಳ ಪೈಕಿ 05 ಕಾಲೇಜುಗಳು ಮಾತ್ರ ಎನ್.ಸಿ.ಟಿ.ಇ ನಿಯಮಾವಳಿಯನ್ವಯ ಕಾರ್ಯನಿರ್ವಹಿಸುತ್ತಿರುವುದಾಗಿ ಹಾಗೂ ಉಳಿದ 11 ಕಾಲೇಜುಗಳ ಕುರಿತು ಮಾಹಿತಿಯನ್ನು ಸಭೆಯಲ್ಲಿ ವಿವರಿಸಿದರು.<br>ಈ ಕುರಿತು ಚರ್ಚಿಸಿದ ಸಭೆಯು, ಸಮಿತಿಯು ಸಲ್ಲಿಸಿರುವ ವರದಿಯನ್ವಯ ಮುಂದಿನ ಕ್ರಮ ಕೈಗೊಳ್ಳಲು ಹಾಗೂ ಸದರಿ ಕಾಲೇಜುಗಳಿಗೆ ಎನ್.ಸಿ.ಟಿ.ಇ ನಿಯಮಾವಳಿಗಳನುಸಾರ ಮೂಲಭೂತ ಸೌಕರ್ಯಗಳನ್ನು ಹಾಗೂ ಸಮಿತಿಯು ವರದಿಯಲ್ಲಿ ವಿಧಿಸಿರುವ ಷರತ್ತುಗಳನ್ನು 04 ತಿಂಗಳ ಒಳಗಾಗಿ ಪಾಲಿಸಿ ಅನುಪಾಲನಾ ವರದಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಅವಕಾಶ ನೀಡುವುದು. ತದನಂತರದಲ್ಲಿ, ಕಾಲೇಜುಗಳು ಸಲ್ಲಿಸುವ ಅನುಪಾಲನಾ ವರದಿಯನ್ನು ಸದರಿ ಸಮಿತಿಗಳಿಂದ ಪುನರ್ ಪರಿಶೀಲಿಸಿ ಸಮಿತಿ ಸಲ್ಲಿಸುವ ವರದಿಯನ್ನು ಮುಂಬರುವ ವಿದ್ಯಾವಿಷಯಕ ಪರಿಷತ್ತು ಸಭೆಗೆ ಮಂಡಿಸಲು ತೀರ್ಮಾನಿಸಿ ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |
| **ಶೈಕ್ಷಣಿಕ ವಿಭಾಗ** | | | |
| 12 | 2024–25.ಸಾ.ವಿ.ಪ–01 ಶೈ.ವಿ–08 | ತುಮಕೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಮಟ್ಟದಲ್ಲಿ ಸ್ಕೂಲ್ ಪರಿಕಲ್ಪನೆ ಅನ್ನು ಅನುಷ್ಠಾನಗೊಳಿಸುವ ಬಗ್ಗೆ. | ತುಮಕೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಮಟ್ಟದಲ್ಲಿ ಸ್ಕೂಲ್ ಪರಿಕಲ್ಪನೆ ಅನ್ನು ಅನುಷ್ಠಾನಗೊಳಿಸುವ ಕುರಿತು ಚರ್ಚಿಸಿದ ಸಭೆಯು, ಸ್ಕೂಲ್ ವ್ಯವಸ್ಥೆಯು ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಅನುಕೂಲವಾಗುವುದರಿಂದ ಈ ಕೆಳಕಂಡ ವಿಷಯಗಳನ್ನು:<br>1) School of Natural Sciences,<br>2) School of Physical Sciences<br>3) School of Chemical Sciences<br>4) School of Earth and Environmental Sciences<br>5) School of Commerce and Management<br>6) School of Languages<br>7) School of Humanities / Social Sciences<br>8) School of Information Technologies<br>9) School of Education<br>10) School of Law<br>ಮುಂತಾದವುಗಳನ್ನು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸಲು ಹಾಗೂ ಪ್ರತಿ ಸ್ಕೂಲಿಗೆ ಒಬ್ಬರು ನಿರ್ದೇಶಕರನ್ನು ಎರಡು ವರ್ಷಗಳ ಅವಧಿಗೆ |

| | | | |
|---|---|---|---|
| | | | ನೇಮಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯು ಅನುಮತಿಸಿ ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |
| 13 | 2024–25.ಸಾ.ವಿ.ಪ–01 ಶೈ.ವಿ–09 | ಮಹಿಳಾ ವಿದ್ಯಾರ್ಥಿಗಳಿಗೆ ಮಾತೃತ್ವ / ಶಿಶುಪಾಲನಾ ರಜೆ ಮಂಜೂರು ಮಾಡಲು ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸು ಬಗ್ಗೆ | ತುಮಕೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಎಲ್ಲಾ ಸಂಯೋಜಿತ, ಘಟಕ ಕಾಲೇಜುಗಳು ಮತ್ತು ಸ್ನಾತಕೋತ್ತರ ವಿಭಾಗಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಹಿಳಾ ವಿದ್ಯಾರ್ಥಿಗಳಿಗೆ ಮಾತೃತ್ವ / ಶಿಶುಪಾಲನಾ ರಜೆ ಮಂಜೂರು ಮಾಡಲು ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸು ಕುರಿತು ಚರ್ಚಿಸಿದ ಸಭೆಯು, ಈ ಕುರಿತು ಯು.ಜಿ.ಸಿ ನಿಯಮಾವಳಿಯನ್ವಯ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲು ಅನುಮತಿಸಿ ಸಿಂಡಿಕೇಟ್ ಸಭೆಗೆ ಶಿಫಾರಸ್ಸು ಮಾಡಿತು. |

ಮಾನ್ಯ ಕುಲಸಚಿವರು

ಮಾನ್ಯ ಕುಲಪತಿಗಳು